ನಂತರ ಪೋಲಿಸ್ ಇಲಾಖೆಯಲ್ಲಿ 31-12-82ರಲ್ಲಿ ಪ್ರಮೋಷನ್ ಕೊಟ್ಟಿರುತ್ತಾರೆ. ಹೀಗೆ ಪ್ರಮೋಷನ್ ಕೊಡುವಾಗ ಆಜ್ಞೆಯನ್ನು ಅನುಸರಿಸಿ ಕೊಟ್ಟಿರುತ್ತಾರೆಯೇ ? ಆ ಬಗ್ಗೆ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—26-11-1982ರಿಂದ ಕಟ್ಟುನಿಟ್ಟಾಗಿ ಆಜ್ಞೆಯನ್ನು ಪಾಲಿಸ ಬೇಕೆಂದು ಹೇಳಿ ಎಲ್ಲಾ ಸರ್ಕಾರಿ ಕಚೇರಿಗಳಿಗೂ ತಿಳಿಸಲಾಗಿದೆ. ಕೆಲವು ಇಲಾಖೆಗಳಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ 5 ವರ್ಷ ಇದ್ದುದನ್ನು 3 ವರ್ಷಕ್ಕೆ ಇಳಿಸಲಾಗಿದೆ. ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಸಾಕಷ್ಟು ಅಭ್ಯರ್ಥಿಗಳು ಇಲ್ಲದಿದ್ದರೆ ಪ್ರಮೋಷನ್ ಕೊಡಬೇಕೆಂದು ತಿಳಿಸಿರುತ್ತೇನೆ. ಹಾಗೆಯೇ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮತ್ತು ಗಣಿ ಮತ್ತು ಭೂಗರ್ಭ ಇಲಾಖೆಯಲ್ಲೂ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗೆ ತಿದ್ದುಪಡಿ ಮಾಡಲಾಗಿದೆ. ಮತ್ತೆ ಪ್ರಮೋಷನ್ ಕೊಡಬೇಕಾದರೆ ಇಷ್ಟೇ ವರ್ಷ ಸರ್ವೀಸ್ ಮಾಡಬೇಕೆಂದು ರೂಲ್ಸ್ ಮಾಡಿಲ್ಲ. ಉಳಿದ ಇಲಾಖೆಗಳಿಗೂ ಪರಿಶೀಲಿಸಿ ಅದನ್ನು ಕೂಡಲೇ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಆರ್ಹ ಅಭ್ಯರ್ಥಿಗಳು ಇದ್ದು ಮೂರೇ ವರ್ಷ ಸರ್ವೀಸ್ ಆಗಿದ್ದರೂ ಕೂಡ ಪ್ರಮೋಷನ್ ಕೊಡಲು ಅವಕಾಶ ಇರುವಾಗ ಏತಕ್ಕೆ ಪ್ರಮೋಷನ್ ಕೊಡಬಾರದು ಎಂದು ಕೇಳು ತ್ತೇನೆ. ಇದನ್ನು ಸಮಗ್ರವಾಗಿ ಎಲ್ಲಾ ಇಲಾಖೆಗಳಿಗೂ ಜಾರಿಗೆ ತರದೇ ಒಂದೊಂದೇ ಇಲಾಖೆಯಲ್ಲಿ ಮಾತ್ರ ಏತಕ್ಕೆ ಮಾಡಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಇಲಾಖೆಗಳಿಗೂ ಈ ರೀತಿ ಪರಿಶೀಲನೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಕೆಲವು ಡಿಪಾರ್ಟ್‌ಮೆಂಟ್‌ನವರು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸನ್ನು ತಿದ್ದುಪಡಿ ಮಾಡಬೇಕೆಂದು ಹೇಳಿದರೆ ಕೆಲವು ಡಿಪಾರ್ಟ್‌ಮೆಂಟ್‌ನವರು ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ಪ್ರಿಸಿಡೆಂಟ್ಸ್‌ನ್ನು ನೋಡಬೇಕಾಗಿರುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಪ್ರಮೋಷನ್ ಕೊಡಲು ಐದು ವರ್ಷ ಅಥವ ಕನಿಷ್ಟ ಮೂರು ವರ್ಷ ಗಳಾದರೂ ಇರಬೇಕೆಂದು ಇರುತ್ತದೆ. ಐದುವರ್ಷ ಸರ್ವೀಸ್ ಆದವರು ಇಲ್ಲದಿದ್ದರೆ ಮೂರು ವರ್ಷಗಳ ಸರ್ವೀಸ್ ಆಗಿದ್ದರೂ ಆಯಾಯಾ ಇಲಾಖೆಗಳಲ್ಲಿ ಬಡ್ತಿ ಕೊಡುವುದರಲ್ಲಿ ಸರ್ಕಾರದಲ್ಲಿ ಅವಕಾಶವಿರುತ್ತದೆ. ಹೀಗಿರುವಾಗ ಐದು ವರ್ಷ ಸರ್ವೀಸ್ ಆದವರು ಸಿಕ್ಕದಿದ್ದರೆ ತತ್‌ಕ್ಷಣ ಮೂರು ವರ್ಷ ಆಗಿರುವವರಿಗೆ ಏತಕ್ಕೆ ಬಡ್ತಿಯನ್ನು ಕೊಡಬಾರದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರೀತಿ ಮಾಡಬೇಕೆಂದು ಸರ್ಕಾರ ಆದೇಶ ಕೊಟ್ಟಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಕೆಲವು ಇಲಾಖೆಗಳಲ್ಲಿ ಈ ರೀತಿ ಮಾಡುತ್ತಿಲ್ಲ. ಇಲಾಖೆಯವರಿಗೆ ಎಚ್ಚರಿಕೆಯನ್ನು ಕೊಡುವುದಕ್ಕೆ ತಿದ್ದುಪಡಿ ಮಾಡಬೇಕಾದಂಥ ಅವಶ್ಯಕತೆಯೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದಕ್ಕಾಗಿಯೇ ಒಂದು ಉನ್ನತ ಮಟ್ಟದ ಸಮಿತಿ ಇತ್ತು. ಈ ಸಮಿತಿಯನ್ನು ತಾವು ಮುಂದುವರಿಸಿಕೊಂಡು ಹೋಗುತ್ತಿದ್ದೀರಾ ಹೇಗೆ ? ಮತ್ತು ಪ್ರತಿ ಇಲಾಖೆಯಲ್ಲಿಯೂ ಈ ಮೀಸಲಾತಿ ಹುದ್ದೆಗಳನ್ನು ಕೊಟ್ಟಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ರೆವ್ಯೂ ಮಾಡುವುದಕ್ಕೆ ಆಗಾಗ್ಗೆ ಮೀಟಿಂಗ್ ಮಾಡುತ್ತಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಈ ಕಮಿಟಿಯವರು ಕೊಟ್ಟ ವರದಿಯನ್ನು ಜಾರಿಗೆ ಸರಲು ಕ್ರಮ ತೆಗೆದುಕೊಂಡಿದ್ದೇವೆ. ಈ ವಿಚಾರದಲ್ಲಿ ರೆವ್ಯೂ ಮಾಡುವುದು ಆವಶ್ಯಕತೆ ಇದ್ದರೆ ತಮ್ಮ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ನೋಡುತ್ತೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈಗಾಗಲೇ ಎರಡು ಇಲಾಖೆಗಳು ಈ ಕ್ರಮಗಳನ್ನು ಕಾರ್ಯರೂಪಕ್ಕೆ ತಂದಿವೆ ಎಂದು ಹೇಳಿದ್ದೀರಿ. ಅಂದರೆ ಈ ಎರಡು ಇಲಾಖೆಗಳು ಎಷ್ಟು ಪರ್ಸೆಂಟ್ ಇಂಪ್ಲಿಮೆಂಟ್ ಮಾಡಿವೆ ಮತ್ತು ಇನ್ನುಳಿದ ಇಲಾಖೆಗಳು ಇದನ್ನು ಇಂಪ್ಲಿಮೆಂಟ್ ಮಾಡದಿದ್ದರೆ ಸಂಬಂಧಪಟ್ಟವರಿಗೆ ಉಗ್ರ ವಾದಂಥ ಶಿಕ್ಷೆ ಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ದಿನಾಂಕ 26-11-1982ರಂದು ಈ ಬಗ್ಗೆ ಸರ್ಕಾರದ ಆಜ್ಞೆ ಯನ್ನು ಹೊರಡಿಸಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ಹೇಳಿದ್ದೇವೆ. ಒಂದು ವೇಳೆ ಯಾರಾದರೂ ಇದನ್ನು ಪಾಲನೆ ಮಾಡದಿದ್ದರೆ ಅಂತಹವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎ. ಕೆ. ಕಟ್ಟಿಮನಿ.—ಪೋಲೀಸ್ ಇಲಾಖೆಯಲ್ಲಿ ಕೊಟ್ಟಿರುವ 37 ಪ್ರಮೋಷನ್‌ಗಳ ಪೈಕಿ ಈ ಆದೇಶವನ್ನು ಅನುಸರಿಸದೇ ಇದ್ದರೆ ತಾವು ಅದನ್ನು ಮತ್ತೊಮ್ಮೆ ರೆವ್ಯೂ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ವೇಳೆ ಆ ರೀತಿ ಏನಾದರು ಈ ಆಜ್ಞೆಯನ್ನು ಉಲ್ಲಂಘನೆ ಮಾಡಿದ್ದರೆ ಅದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಕಬಿನಿ ನೀರು ಮಲಿನವಾಗಿರುವ ಬಗ್ಗೆ

180. ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಕಬಿನಿ ಸುತ್ತಮುತ್ತಲಿನ ಕಾರ್ಖಾನೆಗಳಿಂದ ಕೊಳಕು ನೀರು ಬಂದು ನೀರು ಮಲಿನವಾಗಿ ಕುಡಿಯಲು ಸಹ ಉಪಯೋಗವಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಆರೋಗ್ಯ ದೃಷ್ಟಿಯಿಂದ ಇಲ್ಲಿನ ಸಾರ್ವಜನಿಕರಿಗೆ ಕೊಳಕು ನೀರಿನಿಂದ ರೋಗಗಳು ಉತ್ಪತ್ತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ. ಹಾಗಿದ್ದಲ್ಲಿ ಇದರ ಬಗ್ಗೆ ಸಾರ್ವಜನಿಕರು ಅನೇಕ ಮನವಿಗಳನ್ನು ಸಲ್ಲಿಸಿದ್ದಾರೆಯೆ ; ಹಾಗಿದ್ದಲ್ಲಿ ಈವರೆಗೆ ಯಾವ ಕ್ರಮವನ್ನು ಸರ್ಕಾರದವರು ಕೈಗೊಂಡಿದ್ದಾರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು) :—

ಅ) ಹೌದು.

ಆ) ಇಲ್ಲ.

ಇ) ಈ ಬಗ್ಗೆ ಮನವಿಗಳು ಬಂದಿವೆ. ಸರ್ಕಾರವು ನಂಜನಗೂಡಿನ ಸುತ್ತಮುತ್ತಣ ಕಾರ್ಖಾನೆಗಳಿಗೆ ಮತ್ತು ನಂಜನಗೂಡು ಪುರಸಭೆಗೆ ಕಲುಷಿತ ನೀರನ್ನು ನಿಗದಿ ಪಡಿಸಿದ ಮಾನಕಕ್ಕೆ ಶುದ್ಧೀಕರಿಸಲು ಮತ್ತು ಹಾಗೆ ಶುದ್ಧೀಕರಿಸಿದ ನೀರನ್ನು ನದಿಗೆ ಬಿಡದೆ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲು ಸೂಕ್ತ ನಿರ್ದೇಶನಗಳನ್ನು ಕೊಟ್ಟಿದೆ. ಆದರೆ ಈಗ ನಂಜನಗೂಡು ಪಟ್ಟಣದ ಕಲುಷಿತ ನೀರು ಮತ್ತು ಸುಜಾತ ಟೆಕ್ಸ್‌ಟೈಲ್ ಕಾರ್ಖಾನೆಯು ತನ್ನ ಶುದ್ಧೀಕರಿಸಿದ ನೀರನ್ನು ಕಾರ್ಖಾನೆಯ ತೋಟಗಳಿಗೆ ಉಪಯೋಗಿಸಲು ಕ್ರಮ ಕೈಗೊಳ್ಳುತ್ತಿದೆ. ನಂಜನಗೂಡು ಪುರಸಭೆಯ ಪಟ್ಟಣದ ಕಲುಷಿತ ನೀರನ್ನು ಶುದ್ಧೀಕರಿಸಲು ಇನ್ನೂ ಕ್ರಮ ಕೈಗೊಳ್ಳಬೇಕಾಗಿದೆ.

ಶ್ರೀ ಎಂ. ಮಹದೇವ್.—ನಂಜನಗೂಡು ದಕ್ಷಿಣಕಾಶಿ ಎಂದು ಹೆಸರು ಪಡೆದಿದೆ. ಇಲ್ಲಿನ ದೇವರ ದರ್ಶನಕ್ಕೆಂದು ದೇಶದ ಮೂಲೆ ಮೂಲೆಗಳಿಂದ ಸಾವಿರಾರು ಜನರು ಬರುತ್ತಾರೆ. ಇಂತಹ ಪಟ್ಟಣದಲ್ಲಿ ಜನರು ಕಲುಷಿತ ನೀರನ್ನು ಕುಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಮೇಲೆ ಸಹ ಕಾರ್ಖಾನೆಗಳ ಮಾಲೀಕರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕಲುಷಿತ ನೀರನ್ನು ಬಿಡುವುದರಿಂದ ಜನರಿಗೆ ತೊಂದರೆಯಾಗುತ್ತಿದ್ದು ಇದರ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಈ ಪಟ್ಟಣದ ಸುತ್ತಮುತ್ತ ಇರುವ ಕಾರ್ಖಾನೆಗಳ ಮಾಲೀಕರಿಗೆ ಆದೇಶ ಕೊಟ್ಟಿದ್ದೇವೆ. ಇದರ ಜೊತೆಗೆ ನಂಜನಗೂಡಿನ ಪುರಸಭೆಯವರು ಈ ಕಲುಷಿತ ನೀರನ್ನು ಶುದ್ಧೀಕರಣ ಮಾಡಲು ಆದಷ್ಟೂ ಜಾಗ್ರತೆ ಕ್ರಮ ಕೈಕೊಳ್ಳಬೇಕೆಂದು ಈಗಾಗಲೇ ಆದೇಶ ಕಳುಹಿಸಿದ್ದೇವೆ.

ಶ್ರೀ ಎಂ. ಮಹದೇವ್.—ಇಲ್ಲಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಅಂದರೆ ಮಲಿನವಾದಂಥ ನೀರನ್ನು ಜನರು ಕುಡಿದರೆ ಜನರ ಆರೋಗ್ಯ ಕೆಡುವುದಿಲ್ಲ ಎಂದು ಸರ್ಕಾರದ ಅಭಿಪ್ರಾಯವೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಲಿನವಾದಂಥ ನೀರನ್ನು ಕುಡಿದರೆ ಖಂಡಿತವಾಗಿ ಜನರ ಆರೋಗ್ಯ ಕೆಡುತ್ತದೆ. ಆದರೆ ಈ ಪ್ರಶ್ನೆ ಅನಗತ್ಯ ಎಂದು ಭಾವಿಸಿ ಈ ರೀತಿ ಉತ್ತರ ಕೊಡಲಾಗಿದೆ. ಈಗಾಗಲೇ ಕಲುಷಿತ ನೀರನ್ನು ಶುದ್ಧೀಕರಿಸಲು ಸೂಕ್ತವಾದ ಕ್ರಮವನ್ನು ಕೈಕೊಳ್ಳುತ್ತಿದ್ದೇವೆ.

ಶ್ರೀ ಎಂ. ಮಹದೇವ್.—ಇದನ್ನು ಸರ್ಕಾರದ ಗಮನಕ್ಕೆ ತಾವು ತಂದಮೇಲೆ ಜನರು ಈ ಕಲುಷಿತ ನೀರನ್ನು ಕುಡಿಯುವುದನ್ನು ಜಾಗ್ರತೆ ತಪ್ಪಿಸುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಬಗ್ಗೆ ಅತಿ ಶೀಘ್ರವಾಗಿ ಏನು ಕ್ರಮ ಕೈಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಹದೇವ್.—ನಾನು ಮೊದಲೇ ಹೇಳಿದಂತೆ ಎಲ್ಲ ಕಡೆಯಿಂದಲೂ ಭಕ್ತಾದಿಗಳು ಇಲ್ಲಿಗೆ ಬರುತ್ತಿರುವ ಕಾರಣ ಜನರು ಇಂತಹ ನೀರನ್ನು ಕುಡಿದು ರೋಗಕ್ಕೆ ತುತ್ತಾಗುವುದನ್ನು ತಪ್ಪಿಸಲು ಮತ್ತು ಜನರು ಸಾವುನೋವಿಗೆ ತುತ್ತಾಗುವುದನ್ನು ತಪ್ಪಿಸಲು ಇಷ್ಟೇ ದಿವಸಗಳಲ್ಲಿ ಈ ಕೆಲಸ ಮಾಡುವುದಾಗಿ ಭರವಸೆ ಕೊಡಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕಲುಷಿತ ನೀರನ್ನು ಕುಡಿದರೆ ಜನರಿಗೆ ನಾನಾ ರೀತಿಯ ರೋಗಗಳು ಬರುತ್ತವೆಂಬುದು ಸರ್ಕಾರಕ್ಕೂ ಗೊತ್ತಿದೆ. ಆದ್ದರಿಂದ ಇದನ್ನು ತಪ್ಪಿಸಲು ಅತಿ ಶೀಘ್ರಗತಿಯಿಂದ ಕ್ರಮ ತೆಗೆದುಕೊಳ್ಳಲು ಎಲ್ಲ ಪ್ರಯತ್ನಗಳನ್ನೂ ನಾವು ಮಾಡುತ್ತೇವೆ.

ಬಲ್ಕಿ ಪಟ್ಟಣಕ್ಕೆ ಆಸ್ಪತ್ರೆ ಕಟ್ಟಲು ಮಂಜೂರಾತಿ ಬಗ್ಗೆ

25. ಶ್ರೀ ಭೀಮಣ್ಣ ಖಂಡ್ರೆ (ಬಾಲ್ಕಿ).— ಮೂರನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ. ಆರೋಗ್ಯ ಮತ್ತು ಕುಟುಂಬ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಬೀದರ್ ಜಿಲ್ಲೆಯ ಬಲ್ಕಿ ಪಟ್ಟಣದಲ್ಲಿ 30 ಹಾಸಿಗೆಗಳ ಆಸ್ಪತ್ರೆಯ ಕಟ್ಟಡವನ್ನು ಕಟ್ಟಲು ಮಂಜೂರಾತಿಯನ್ನು ಕೊಟ್ಟಿದೆಯೇ? ಹಾಗಿದ್ದರೆ ಯಾವಾಗ ;